# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:13/07/2016

ಪ್ರಕರಣ ಸಂಖ್ಯೆ: ಆರ್ಎ. 71/2014-15

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀ ಅಮೃತಮ್ಮ<br>ಕೋಂ ಲೇಟ್ ಜೆ.ಎನ್. ಗೋಪಾಲಕೃಷ್ಣ<br>2. ಶ್ರೀಮತಿ ಶ್ಯಾಮಲ<br>ಬಿನ್ ಲೇಟ್ ಜೆ.ಎನ್. ಗೋಪಾಲಕೃಷ್ಣ<br>3. ಅರ್ಚನಾ<br>ಬಿನ್ ಲೇಟ್ ಜೆ.ಎನ್. ಗೋಪಾಲಕೃಷ್ಣ<br>4. ಉದಯ್ ಕುಮಾರ್<br>ಬಿನ್ ಲೇಟ್ ಜೆ.ಎನ್. ಗೋಪಾಲಕೃಷ್ಣ<br>ಅಪ್ರಾಪ್ತರು ಇವರ ಪರವಾಗಿ ಪೋಷಕರು ತಾಯಿ<br>– ಎಲ್ಲರೂ ವಾಸ<br>ಸುಂದರಪಾಳ್ಯ ಗ್ರಾಮ<br>ಕ್ಯಾಸಂಬಹಳ್ಳಿ ಹೋಬಳಿ<br>ಬಂಗಾರಪೇಟೆ ತಾಲ್ಲೂಕು.<br>(ವಕೀಲರು: ಶ್ರೀ ಎಸ್.ರಘು ರವರಿಂದ) | | 1. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>2. ಸಿ.ರುಕ್ಮಾಂದರೆಡ್ಡಿ<br>ಬಿನ್ ಚಂಗಾರೆಡ್ಡಿ<br>ಬಜಾರ್ ಸ್ಟ್ರೀಟ್<br>ವಿ.ಕೋಟೆ ,ವಿ ಕೋಟೆ ಮಂಡಲಂ<br>ಚಿತ್ತೂರು ಜಿಲ್ಲೆ.<br>3. ರಾಜಸ್ವ ನೀರೀಕ್ಷಕರು<br>ಕ್ಯಾಸಂಬಹಳ್ಳಿ ಹೋಬಳಿ<br>ಬಂಗಾರಪೇಟೆ ತಾಲ್ಲೂಕು<br>4. ತಹಶೀಲ್ದಾರ್<br>ಬಂಗಾರಪೇಟೆ ತಾಲ್ಲೂಕು<br>(ವಕೀಲರು: ಜಿ.ಸಿ.ಹನುಮಂತು ರವರಿಂದ) |

ವಿಷಯ: ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ, ಕೋಲಾರ ರವರ ಕ್ರಮಾಂಕ: ಆರ್.ಎ 515(ಎ)/2011-12 ದಿನಾಂಕ : 16-09-2014. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 49 ರಂತೆ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಬಂಗಾರಪೇಟೆ ತಾಲ್ಲೂಕು, ಕ್ಯಾಸಂಬಳ್ಳಿ ಹೋಬಳಿ, ಎನ್.ಜಿ.ಹುಲ್ಕೂರು ಗ್ರಾಮದ ಸ.ನಂ. 71/ಪಿ66 ರ ಜಮೀನಿಗೆ ಸಂಬಂಧಿಸಿದಂತೆ ಮಾಡಿರುವ ಹಕ್ಕು ಬದಲಾವಣೆ ಕ್ರಮಾಂಕ ಎಂ.ಆರ್. 534/92-93 ದಿನಾಂಕ 17/07/1992 ರ ಆದೇಶವನ್ನು ಪ್ರಶ್ನಿಸಿ ಸಿ.ರುಕ್ಮಾಂಗದ ರೆಡ್ಡಿ ಬಿನ್ ಚಂಗಾರೆಡ್ಡಿ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ, ಕೋಲಾರ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಸಂಖ್ಯೆ:. ಆರ್.ಎ 515(ಎ)/2011-12 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ವಿಚಾರಣೆ ನಂತರ ದಿನಾಂಕ 16-09-2014. ಸಹಾಯಕ ಕಮೀಷನರ್ ರವರು ಇವರ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿ ಪ್ರಶ್ನಿತ ಮ್ಯುಟೇಷನ್ ಆದೇಶವನ್ನು ರದ್ದುಪಡಿಸಿ, ಸದರಿ ಜಮೀನನ್ನು ಸರ್ಕಾರದ ಹೆಸರಿಗೆ ದಾಖಲಿಸಲು ಆದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಇವರ ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡಿದೆ. ಉಭಯತ್ರರಿಗೂ ವಿಚಾರಣೆಗೆ ಹಾಜರಾಗುವಂತೆ ತಿಳಿಸಿ ನೋಟೀಸು ನೀಡಿದೆ.

...2

ದಿನಾಂಕ:13/01/2016 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಉಭಯತ್ರರೂ ಗೈರು ಪ್ರಕರಣವನ್ನು ಮುಂದೂಡಲಾಯ್ತು. ದಿನಾಂಕ:02/03/2016 ರಂದು ಉಭಯತ್ರರು ಹಾಜರು, ಎರಡನೇ ಎದುರುದಾರರ ವಕೀಲರು ವಕಾಲತ್‌ನೊಂದಿಗೆ ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಉಭಯತ್ರರರ ಕೋರಿಕೆ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

ಮೇಲ್ಮನವಿದಾರರ ಪರವಾಗಿ ವಕೀಲರು ಸಲ್ಲಿಸಿರುವ ಮೇಲ್ಮನವಿ ಹಾಗೂ ಲಿಖಿತ ವಾದದಲ್ಲಿ ಬಂಗಾರಪೇಟೆ ತಾಲ್ಲೂಕು, ಕ್ಯಾಸಂಬಳ್ಳಿ ಹೋಬಳಿ, ಎನ್.ಜಿ.ಹುಲ್ಕೂರು ಗ್ರಾಮದ ಸರ್ವೆ ನಂಬರ್ 71 ಸರ್ಕಾರಿ ಜಮೀನಾಗಿದ್ದು, ಈ ಪೈಕಿ 3-00 ಎಕರೆ ಜಮೀನು ಜೆ.ನಾರಾಯಣಶೆಟ್ಟಿ ರವರಿಗೆ ಸಂಖ್ಯೆ ಎಲ್.ಎನ್.ಡಿ.ಸಿ.ಆರ್.ಕೆವೈ 146/77-78 ರಂತೆ ಮಂಜೂರಾಗಿದ್ದು, ಅದರಂತೆ ಸಾಗುವಳಿ ಚೀಟಿ ನೀಡಿರುವುದಾಗಿ ತಿಳಿಸಿ ಸಾಗುವಳಿ ಚೀಟಿಯ ಜೆರಾಕ್ಸ್ ಪ್ರತಿ ಮತ್ತು ಸಾಗುವಳಿ ಚೀಟಿ ನೀಡಿರುವ ವಹಿಯ ನಕಲಿನ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ ಹಾಗೂ ಸದರಿ ಸಾಗುವಳಿ ಚೀಟಿಯಂತೆ ಎಂ.ಆರ್.453/89-90 ರಂತೆ ಖಾತೆ ಆಗಿ ಪಹಣಿಯಲ್ಲಿ ನಮೂದಾಗಿರುವುದಾಗಿ ತಿಳಿಸಿ ಮ್ಯುಟೇಷನ್ ಹಾಗೂ ಪಹಣಿಯ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಮಂಜೂರುದಾರರು ಪವತಿ ನಂತರ ಇವರ ಮಗ ಗೋಪಾಲಕೃಷ್ಣಶೆಟ್ಟಿ ರವರಿಗೆ ಪವತಿವಾರಸ್ಸು ಮೂಲಕ ಎಂ.ಆರ್. 534/92-93 ರಂತೆ ಖಾತೆಯಾಗಿದ್ದು, ಇವರು ದಿನಾಂಕ 19/1/2012 ರಂದು ಪವತಿ ಆದ ನಂತರ ಇವರ ಹೆಂಡತಿ ಅಮೃತಮ್ಮ ಅಂದರೆ ಒಂದನೇ ಮೇಲ್ಮನವಿದಾರರ ಹೆಸರಿಗೆ ಎಂ.ಆರ್. 18/2013-14 ರಂತೆ ಪವತಿವಾರಸ್ಸು ಮುಖೇನ ಖಾತೆ ಆಗಿರುವುದಾಗಿ ತಿಳಿಸಿ ಅದರ ಮ್ಯುಟೇಷನ್ ಹಾಗೂ ಪಹಣಿಯ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತಾರೆ. ಹೀಗಿರುವಾಗ ಎರಡನೇ ಎದುರುದಾರರಿಗೂ ಈ ಜಮೀನಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಈ ಜಮೀನಿನ ಮಂಜೂರಾತಿ ಬಗ್ಗೆ ಸಹಾಯಕ ಕಮೀಷನರ್ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಆಗ ತಹಶಿಲ್ದಾರ್ ಬಂಗಾರಪೇಟೆ ತಾಲ್ಲೂಕು ರವರು ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೇ ಜೆ.ನಾರಾಯಣಶೆಟ್ಟಿ ರವರಿಗೆ ಮಂಜೂರಾದ ಬಗ್ಗೆ ಯಾವುದೇ ನಮೂದು ಇರುವುದಿಲ್ಲವೆಂದು ಸಹಾಯಕ ಕಮೀಷನರ್ ರವರಿಗೆ ಬರೆದ ಪತ್ರದ ಆಧಾರದ ಮೇರೆಗೆ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿ ಪ್ರಶ್ನಿತ ಮ್ಯುಟೇಷನ್ ಆದೇಶವನ್ನು ರದ್ದುಪಡಿಸಿ, ಸದರಿ ಜಮೀನನ್ನು ಸರ್ಕಾರದ ಹೆಸರಿಗೆ ದಾಖಲಿಸಲು ಆದೇಶಿಸಿರುವ ಪ್ರಶ್ನಿತ ಆದೇಶ ಕಾನೂನು ಬಾಹಿರವಾಗಿರುತ್ತದೆ. ಆದ್ದರಿಂದ ಸಹಾಯಕ ಕಮೀಷನರ್ ರವರ ಆದೇಶವನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸುವಂತೆ ಕೋರಿರುತ್ತಾರೆ.

ಎರಡನೇ ಎದರುದಾರು ಪರವಾಗಿ ಮಂಡಿಸಲಾದ ಲಿಖಿತ ವಾದದಲ್ಲಿ ಮೇಲ್ಮನವಿದಾರರು ತಮ್ಮ ಮೇಲ್ಮನವಿಯಲ್ಲಿ ತಿಳಿಸಿರುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾಗಿರುತ್ತದೆ ಮತ್ತು ಸೃಷ್ಟಿಸಿಕೊಂಡಿರುವಂತಹದ್ದು, ಬಂಗಾರಪೇಟೆ ತಾಲ್ಲೂಕು, ಕ್ಯಾಸಂಬಳ್ಳಿ ಹೋಬಳಿ, ಎನ್.ಜಿ.ಹುಲ್ಕೂರು ಗ್ರಾಮದ ಹಳೇ ಸರ್ವೆ ನಂಬರ್ 71/ಪಿ-66 ರಲ್ಲಿನ 1-30 ಎಕರೆ ಜಮೀನು ಮೂಲತಃ ಅಬ್ದುಲ್ ಶುಕೂರ್ ರವರಿಗೆ ನಂ. ಜಿಡಿಆರ್ 129/56-57 ರಂತೆ ಸರ್ಕಾರದಿಂದ ಮಂಜೂರಾಗಿದ್ದು, ಇವರ ವಾರಸುದಾರರಾದ ಶ್ರೀಮತಿ ರೋಷನ್ ಬೀ ರವರು ಈ ಜಮೀನನ್ನು ವೆಂಕಟಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ವೆಂಕಟಪ್ಪ ರವರ ಪವತಿ ನಂತರ ಇವರ ಮಗ ವಿ.ದಾಮೋಧರ್ ರವರಿಗೆ ಪವತಿವಾರಸ್ಸು ಖಾತೆ ಆಗಿರುತ್ತೆ ಎಂದು ವಾದಿಸಿರುತ್ತಾರೆ. ನಂತರ ಸದರಿ ಜಮೀನು ದುರಸ್ತಿಯಾಗಿ ಹೊಸ ಸರ್ವೆ ನಂಬರ್ 217 ಆಗಿ 1-30 ಎಕರೆ ವಿಸ್ತೀರ್ಣ ನಿಗದಿಯಾಗಿರುತ್ತೆ ಎಂದು ವಾದಿಸಿರುತ್ತಾರೆ. ವಿ.ದಾಮೋಧರ್ ಹಾಗೂ ಇವರ ಸಹೋದರಿಯರು ಸೇರಿ ಎರಡನೇ ಎದುರುದಾರರಿಗೆ ಸಂಖ್ಯೆ 472/2011-12 ರ ನೋಂದಾಯಿತ ಪತ್ರದಂತೆ ಮಾರಾಟಮಾಡಿರುತ್ತಾರೆಂದು ವಾದಿಸಿರುತ್ತಾರೆ. ನಂತರ ಎರಡನೇ ಎದರುದಾರರು ಸದರಿ ಜಮೀನನ್ನು ಸಂಖ್ಯೆ ಎಎಲ್ಎನ್ ಎಸ್ಆರ್ 233/11-12 ದಿನಾಂಕ 08/02/2012 ರಂತೆ ವ್ಯವಸಾಯದ ಜಮೀನನು ವ್ಯವಸಾಯೇತರ ವಾಣಿಜ್ಯ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆಂದು ವಾದಿಸಿರುತ್ತಾರೆ.

...3